ಸಾಕ್ಷಿ ಯನ್ನು ದಿಃ01.07.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ ಆದರೆ ಸಹಿ ಮಾಡಬಲ್ಲೆನು ಮತ್ತು ಮಾತಾಡಬಲ್ಲೆನು. ಆರೋಪಿತನು ಮೂಲತಃ ಮೆಲ್ಲಹಳ್ಳಿ ಗ್ರಾಮದವನು. ಆರೋಪಿತನು ನನಗೆ ಸುಮಾರು 15 ವರ್ಷಗಳಿಂದ ಪರಿಚಯಸ್ಥನಿರುತ್ತಾನೆ. ಆರೋಪಿತನಿಗೆ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿತನು ವ್ಯವಸಾಯ ಮಾಡುತ್ತಾನೆ.

2. ಆರೋಪಿತರು ನನ್ನ ಬಳಿ ವ್ಯವಸಾಯ ಮಾಡುವ ಸಲುವಾಗಿ ನನ್ನ ಬಳಿ ಹಣ ಪಡೆದುಕೊಂಡಿರುತ್ತಾರೆ. ಈ ವಿಚಾರವನ್ನು ನಾನು ಆರೋಪಿತರಿಗೆ ನೀಡಿದ ನೋಟಿಸ್ ಹಾಗೂ ಪಿರ್ಯಾದಿಯಲ್ಲಿ ಬರೆಸಿರುತ್ತೇನೆ. ದಿಃ 08.12.2020 ರಂದು ಆರೋಪಿತರು ನನ್ನ ಬಳಿ ಹಣ ಪಡೆದುಕೊಂಡಿರುತ್ತಾರೆ. ಹಣವನ್ನು ಪಡೆಯುವ ದಿನ ಆರೋಪಿತರು ಒಬ್ಬರೇ ನನ್ನ ಮನೆಗೆ ಬಂದಿರುತ್ತಾರೆ. ನಾನು ಅದೇ ದಿನ ಆರೋಪಿತರಿಗೆ ಹಣ ನೀಡಿರುತ್ತೇನೆ. ಸದರಿ ಹಣವನ್ನು ಆರೋಪಿತರು 1 ತಿಂಗಳ ಒಳಗೆ ಕೊಡುತ್ತೇನೆ ಎಂದು ನನ್ನಲ್ಲಿ ತಿಳಿಸಿರುತ್ತಾರೆ. ನಾನು ಆರೋಪಿತರಿಗೆ ಹಣವನ್ನು ನೀಡಿದ ಕಾಲಕ್ಕೆ ಆತನು ನನಗೆ ಚೆಕ್ ನೀಡಿರುವುದಿಲ್ಲ. 1 ತಿಂಗಳು ಕಳೆದ ನಂತರ ನಾನು ಆರೋಪಿತರಲ್ಲಿ ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿರುತ್ತೇನೆ. ಆ ದಿವಸ ಆರೋಪಿತರು ಹಣ ವಾಪಸ್ ಕೊಟ್ಟಿರುವುದಿಲ್ಲ. ಸುಮಾರು 1 ತಿಂಗಳ

ಒಳಗೆ ಅಂದರೆ ದಿಃ 08.01.2021 ರಂದು ಆರೋಪಿತರು ನನಗೆ ಚೆಕ್ ನೀಡಿರುತ್ತಾರೆ. ಸಾಲ ಮರುಪಾವತಿ ಕೇಳಲು ಹೋದ ದಿವಸ ಆರೋಪಿತರು ಚೆಕ್ ಕೊಟ್ಟಿರುವುದಿಲ್ಲ. ನಾನು ಆರೋಪಿತರನ್ನು ನಿಖರವಾಗಿ ಯಾವ ದಿನದಂದು ಹೋಗಿ ಹಣ ಮರುಪಾವತಿ ಮಾಡುವಂತೆ ಕೇಳಲು ಹೋಗಿದ್ದೆ ಎಂದು ನನಗೆ ನೆನಪಿಲ್ಲ. ಅರ

3. ನಾನು ವ್ಯವಸಾಯ ಮಾಡುತ್ತೇನೆ. ನನಗೆ 5 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ನಾನು ಹೊಗೆಸೊಪ್ಪು ಬೆಳೆಯುತ್ತೇನೆ. ಹೊಗೆಸೊಪ್ಪು ಬೆಳೆಯಲು ವರ್ಷಕ್ಕೆ ನನಗೆ ರೂ.3 ರಿಂದ 4 ಲಕ್ಷ ಖರ್ಚಾಗುತ್ತದೆ. ಸುಮಾರು 5 ಎಕರೆ ಕ್ಷೇತ್ರದ ಜಮೀನಿನಲ್ಲಿ ವಾರ್ಷಕ್ಕೆ 4,000 ಕೆ.ಜಿ ತಂಬಾಕು ಬೆಳೆಯಬಹುದು. ತಂಬಾಕನ್ನು ಮಾರಾಟ ಮಾಡಲು ನನಗೆ ತಂಬಾಕು ಮಂಡಳಿಯವರು ಲೈಸೆನ್ಸ್ ನೀಡಿರುತ್ತಾರೆ. ನಾನು ಹೊಗೆಸೊಪ್ಪು ಮಾರಾಟ ಮಾಡಿ ಹಣವನ್ನು ಪಡೆಯುವ ಸಲುವಾಗಿ ಎಸ್‌ಬಿಐ ಬ್ಯಾಂಕ್ ನಲ್ಲಿ ಖಾತೆ ತೆರೆದಿರುತ್ತೇನೆ. 2020 ನೇ ಸಾಲಿನಲ್ಲಿ ಎಷ್ಟು ಆದಾಯ ಬಂದಿರುತ್ತದೆ ಮತ್ತು ಎಷ್ಟು ಖರ್ಚಾಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ನನ್ನ ಬ್ಯಾಂಕ್ ಖಾತೆಯ ತಖ್ತೆ ಉತ್ತಾರವನ್ನು ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾಕ್ಷಿ ಸ್ವತಃ ನಾನು ಹೈನುಗಾರಿಕೆಯನ್ನು ಸಹ ಮಾಡುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

4. ಆರೋಪಿತರು ಚೆಕ್ ಅನ್ನು ನನಗೆ ಆತನ ಮನೆಯಲ್ಲಿ ಕೊಟ್ಟಿರುತ್ತಾರೆ ಆ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ. ಆರೋಪಿತರು ಏನು ಓದಿರುತ್ತಾರೆ ಎಂದು ನನಗೆ

ಗೊತ್ತಿಲ್ಲ. ಆರೋಪಿತರು ಸದರಿ ಚೆಕ್ ನೀಡುವ ಕಾಲಕ್ಕೆ ಅದರಲ್ಲಿ ದಿನಾಂಕ ಹಾಗೂ ಮೊತ್ತವನ್ನು ನಮೂದಿಸಿ ತನ್ನ ಸಹಿಯನ್ನು ಮಾಡಿ ಕೊಟ್ಟಿರುತ್ತಾರೆ. ಆರೋಪಿತರಿಗೆ ಕನ್ನಡ ಮತ್ತು ಇಂಗ್ಲೀಷ್ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಸಮಕ್ಷಮವೇ ಚೆಕ್ ಬರೆದಿರುತ್ತಾರೆ. ಸದರಿ ನಿಪಿ-1 ಚೆಕ್ ನಲ್ಲಿ ಬರೆದಿರುವ ಅಕ್ಷರಗಳಿಗೂ ಮತ್ತು ಸಹಿಗಳಿಗೂ ಶಾಯಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಆರೋಪಿತರು ಯಾವುದೇ ಚೆಕ್ ಬರೆದುಕೊಟ್ಟಿರುವುದಿಲ್ಲ ಮತ್ತು ಆರೋಪಿತರಿಗೆ ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ-1 ರಲ್ಲಿರುವ ಸಹಿ ಆರೋಪಿತರಿಗೆ ಸೇರಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಕೀಲರ ಮೂಲಕ ಆರೋಪಿತರಿಗೆ ಯಾವಾಗ ನೋಟಿಸ್ ನೀಡಿರುತ್ತೇನೆ ಎಂದು ಗೊತ್ತಿಲ್ಲ. ಸದರಿ ನೋಟಿಸ್ ಆರೋಪಿತರಿಗೆ ಜಾರಿಯಾಗಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಆರೋಪಿತರಿಗೂ ನನಗೂ ಯಾವುದೇ ಪರಿಚಯ ಇರುವುದಿಲ್ಲ ಮತ್ತು ಆರೋಪಿತರು ನಿಪಿ-1 ಅನ್ನು ತಿಮ್ಮೇಗೌಡರಿಗೆ ಕೊಟ್ಟಿದ್ದು ಅದನ್ನು ದುರುಪಯೋಗಪಡಿಸಿಕೊಂಡು ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ತಿಮ್ಮೇಗೌಡರು ಈ ಪ್ರಕರಣದ ಆರೋಪಿತರ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ಮತ್ತು ನನಗೆ ಯಾವುದೇ ಪರಿಚಯ ಇರುವುದಿಲ್ಲ ಮತ್ತು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ತಿಮ್ಮೇಗೌಡ ಯಾರು ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

6. ತಿಮ್ಮೇಗೌಡ ಯಾರು ಎಂಬುದು ನನಗೆ ಗೊತ್ತಿರುತ್ತದೆ ಮತ್ತು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ